ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 30-03-2017

# ಪತ್ರಿಕಾ ಆಮಂತ್ರಣ

1. ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕಾನಾಮಿಕ್ಸ್‌ನ ಶಂಕುಸ್ಥಾಪನೆ ಕುರಿತಂತೆ

   ಪತ್ರಿಕಾಗೋಷ್ಠಿ:

   ಬಸವರಾಜರಾಯರೆಡ್ಡಿ,
   ಉನ್ನತ ಶಿಕ್ಷಣ ಸಚಿವರು

   ದಿನಾಂಕ: 31-03-2017, ಶುಕ್ರವಾರ, ಸಮಯ: ಮದ್ಯಾಹ್ನ 12.30 ಗಂಟೆಗೆ.

   ಸ್ಥಳ: ಹೋಟೆಲ್ ರಾಡಿಸನ್ ಬ್ಲೂ, (ಏಟ್ರಿಯಾ), ಅರಮನೆ ರಸ್ತೆ, ಬೆಂಗಳೂರು.

2. ಪತ್ರಿಕಾಗೋಷ್ಠಿ:

   ಏಪ್ರಿಲ್ 2 ಮತ್ತು 30 ರಂದು ಹಮ್ಮಿಕೊಂಡಿರುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಬಗ್ಗೆ ಹಾಗೂ ದಡಾರ ಮತ್ತು ರುಬೆಲ್ಲಾ ಲಸಿಕಾ ಅಭಿಯಾನ ಕರ್ನಾಟಕದ ಸಾಧನೆ ಕುರಿತಂತೆ.

   ಡಾ: ಶಾಲಿನಿ ರಜನೀಶ್,
   ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅವರ ಅಧ್ಯಕ್ಷತೆಯಲ್ಲಿ

   ದಿನಾಂಕ: 31-03-2017, ಶುಕ್ರವಾರ, ಸಮಯ: ಅಪರಾಹ್ನ 12.00 ಗಂಟೆಗೆ.

   ಸ್ಥಳ: ಕೊಠಡಿ ಸಂಖ್ಯೆ 118, 1 ನೇ ಮಹಡಿ, ವಿಕಾಸಸೌಧ, ಬೆಂಗಳೂರು.

# <u>ಪತ್ರಿಕಾ ಪ್ರಕಟಣೆ</u>

# <u>ಭೀಕರ ಬರವಿದ್ದರೂ ಗುಳೆ ಕಡಿಮೆಯಾಗಿರುವುದು ಅನ್ನಭಾಗ್ಯ ಯೋಜನೆಯಿಂದ</u>

ಬೆಂಗಳೂರು, ಮಾರ್ಚ್ 30 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಒಂದು ಕೋಟಿ ಎಂಟು ಲಕ್ಷ ಬಿ.ಪಿ.ಎಲ್. ಕಾರ್ಡ್‌ಗಳಿದ್ದು ನಾಲ್ಕು ಕೋಟಿ ಜನರಿಗೆ ಅನ್ನಭಾಗ್ಯ ಯೋಜನೆಯ ಮೂಲಕ ಆಹಾರ ವಿತರಣೆ ನಡೆಯುತ್ತಿದೆ. ಕಳೆದ ಆರು ವರ್ಷಗಳಿಂದ ರಾಜ್ಯ ಬರಗಾಲದಲ್ಲಿದ್ದು ಕಳೆದ ಎರಡು ವರ್ಷಗಳಿಂದ ತೀವ್ರ ಬರಗಾಲ ಕಂಡಿದೆ. ಆದರೂ ಸಹ ಹಳ್ಳಿಗಳಲ್ಲಿ ಕೂಲಿ ಅರಸಿ ಗುಳೆ ಹೋಗುವುದು ಕಡಿಮೆಯಾಗಿದೆ ಎಂದರೆ ಅದಕ್ಕೆ ಅನ್ನಭಾಗ್ಯ ಯೋಜನೆ ಕಾರಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ನಗರದ ಫ್ರೀಡಂಪಾರ್ಕ್‌ನಲ್ಲಿ ಇಂದು ಹಮ್ಮಿಕೊಂಡಿದ್ದ ಉಚಿತ ಹೆಚ್ಚುವರಿ ಅಕ್ಕಿ ವಿತರಣೆ ಹಾಗೂ ಜಾಗೃತ ಸಮಿತಿ ಸದಸ್ಯರಿಗೆ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಸಿವು ಅನುಭವಿಸಿದವರಿಗೆ ಮಾತ್ರ ಗೊತ್ತು. ಹೊಟ್ಟೆ ತುಂಬಿದವರಿಗೆ ಅನ್ನಭಾಗ್ಯ ಯೋಜನೆ ಲಘುವಾಗಿ ಕಾಣಿಸುತ್ತದೆ. ಟೀಕೆಗಳಿಗೆ ಅಂಜುವುದಿಲ್ಲ. ರಾಜ್ಯವನ್ನು ಹಸಿವು ಮುಕ್ತ ಮಾಡುವುದು ನಮ್ಮ ಸರ್ಕಾರದ ಆದ್ಯ ಕರ್ತವ್ಯ ಎಂದರು.

ಸಾಂಕೇತಿಕವಾಗಿ 5 ಫಲಾನುಭವಿಗಳಿಗೆ ಮುಖ್ಯಮಂತ್ರಿಗಳು ಪ್ರತಿ ಯೂನಿಟ್‌ಗೆ 7 ಕೆ.ಜಿ. ಅಕ್ಕಿ ಮತ್ತು ಒಂದು ಕೆ.ಜಿ. ಬೇಳೆಯನ್ನು ವಿತರಿಸುವ ಮೂಲಕ ಹೊಸ ಯೋಜನೆಗೆ ಚಾಲನೆ ನೀಡಿದರು.

'ಜನಮನ' ಕಾರ್ಯಕ್ರಮದ ಮೂಲಕ ಈ ಮುಂಚೆ ಪ್ರತಿ ವ್ಯಕ್ತಿಗೆ ನೀಡುತ್ತಿದ್ದ 5 ಕೆ.ಜಿ. ಅಕ್ಕಿ ಸಾಲುತ್ತಿಲ್ಲ ಎಂಬ ಫಲಾನುಭವಿಗಳ ಬೇಡಿಕೆ ಮೇರೆಗೆ ಮಾನ್ಯ ಮಾಡಿ ಈಗ ಪ್ರತಿ ವ್ಯಕ್ತಿಗೆ 7 ಕೆ.ಜಿ. ಅಕ್ಕಿಯಂತೆ ಮನೆಯ ಎಲ್ಲಾ ಸದಸ್ಯರಿಗೂ ಸೇರಿ ಪೌಷ್ಟಿಕ ಆಹಾರದ ಸಲುವಾಗಿ ಒಂದು ಕೆ.ಜಿ. ಬೇಳೆಯನ್ನು ಸಹಾ ನೀಡಲಾಗುತ್ತಿದೆ.

ಕಳೆದ ವಾರ ಬಜೆಟ್‌ನಲ್ಲಿ ಮಂಡಿಸಿದ್ದ ಹೆಚ್ಚುವರಿ ಅಕ್ಕಿ ನೀಡುವ ಯೋಜನೆಗೆ ಈಗಾಗಲೆ ಚಾಲನೆ ನೀಡಿರುವುದು ನಮ್ಮ ಸರ್ಕಾರದ ಜವಾಬ್ದಾರಿಯನ್ನು ತೋರಿಸುತ್ತದೆ. ಏಪ್ರಿಲ್ 1

ರಿಂದ ಈಗಾಗಲೇ ಬಜೆಟ್‌ನಲ್ಲಿ ಘೋಷಿಸಿರುವ ಕಾರ್ಯಕ್ರಮಗಳ ಜಾರಿಗೆ ಸರ್ಕಾರ ಟೊಂಕಕಟ್ಟಿ ನಿಂತಿದೆ.

ಆಹಾರ ವಿತರಣೆ ಸಹಾ ದೊಡ್ಡ ಜವಾಬ್ದಾರಿಯಾಗಿದ್ದು ಪ್ರತಿ ವಿತರಣಾ ಕೇಂದ್ರದಲ್ಲಿ ಜಾಗೃತ ಸಮಿತಿಯನ್ನು ರಚಿಸಲಾಗಿದ್ದು ವಿತರಕರಿಂದ ಫಲಾನುಭವಿಗಳಿಗೆ ಮೋಸವಾಗುವುದನ್ನು ತಡೆಯುವುದು ಈ ಸಮಿತಿಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ರಾಜ್ಯಾದ್ಯಂತ 5,000 ಸದಸ್ಯರನ್ನು ನೇಮಿಸಲಾಗಿದ್ದು ಅವರಿಗೆ ತಮ್ಮ ಜವಾಬ್ದಾರಿಗಳ ಕುರಿತು ಕಾರ್ಯಾಗಾರವನ್ನು ಹಮ್ಮಿಕೊಂಡಿರುವುದು ಹೆಮ್ಮೆಯ ವಿಷಯ. ವಿತರಕರು ಜಾಗೃತ ಸಮಿತಿ ನೀಡುವ ದೂರಿನ ಅನ್ವಯ ಮೋಸ ಮಾಡಿದ್ದು ಸಾಬೀತಾದಲ್ಲಿ ಅಂಗಡಿ ಲೈಸನ್ಸ್‌ನ್ನು ತಕ್ಷಣವೆ ರದ್ದುಮಾಡುವುದಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ದಿನೇಶ್ ಗುಂಡೂರಾವ್ ಅವರು ಮಾತನಾಡಿ ಯೋಜನೆಗಳಿಗೆ ಕರ್ನಾಟಕ ಒಂದು ಮಾದರಿ ರಾಜ್ಯವಾಗಿ ದೇಶದಲ್ಲಿ ಪ್ರಖ್ಯಾತಿ ಪಡೆದಿದೆ. ನಮ್ಮ ಸರ್ಕಾರ ಮಾತಿಗಿಂತ ಕೆಲಸ ಮಾಡಿ ತೋರಿಸುವುದರ ಮೂಲಕ ಜವಾಬ್ದಾರಿಯನ್ನು ಪ್ರದರ್ಶಿಸುತ್ತಿದೆ. ಬಡವರ ಶೋಷಿತರ ಸಹಾಯಕ್ಕೆ ಸದಾ ಸಿದ್ದ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಹಾಗೂ ಹಜ್ ಸಚಿವ ಆರ್. ರೋಷನ್‌ಬೇಗ್, ಬೆಂಗಳೂರು ನಗರಾಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್, ಶಾಸಕ ವೆಂಕಟರಮಣ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಎಸ್‌ಎಂ/ಜೆಡಿ

## ಶ್ರೀ ದೇವರ ದಾಸಿಮಯ್ಯ ಜಯಂತಿ

ಬೆಂಗಳೂರು, ಮಾರ್ಚ್ 30 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಏಪ್ರಿಲ್ 1 ರಂದು ಸಂಜೆ 6.00 ಗಂಟೆಗೆ ನಗರದ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಆದ್ಯ ವಚನಕಾರ ನೇಕಾರ ಸಂತ ಶ್ರೀ ದೇವರ ದಾಸಿಮಯ್ಯ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ.

ಸಮಾರಂಭದ ಉದ್ಘಾಟನೆಯನ್ನು ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನ, ಹಿರಿಯ ನಾಗರಿಕರ ಸಬಲೀಕರಣ ಸಚಿವೆ ಶ್ರೀಮತಿ ಉಮಾಶ್ರೀ ಅವರು ನೆರವೇರಿಸಲಿದ್ದಾರೆ.

ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಅನಂತಕುಮಾರ್, ನಗರಾಭಿವೃದ್ಧಿ ಮತ್ತು ನಗರ ಯೋಜನೆ ಹಾಗೂ ಬೆಂಗಳೂರು ನಗರ ಜಿಲ್ಲಾ

ಉಸ್ತುವಾರಿ ಸಚಿವ ಕೆ. ಜೆ. ಜಾರ್ಜ್, ಸಮಾಜ ಕಲ್ಯಾಣ ಸಚಿವ ಎಚ್.ಆಂಜನೇಯ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಮಹಾಪೌರರಾದ ಶ್ರೀಮತಿ ಜಿ. ಪದ್ಮಾವತಿ ಹಾಗೂ ಶಾಸಕರು, ಪುತ್ತೂರು ವಿಧಾನಸಭಾ ಕ್ಷೇತ್ರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಸದೀಯ ಕಾರ್ಯದರ್ಶಿಗಳು ಶ್ರೀಮತಿ ಶಕುಂತಲಾ ಟಿ. ಶೆಟ್ಟಿ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಹಾಗೂ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಆರ್.ವಿ. ದೇವರಾಜ್ ಅವರು ವಹಿಸಲಿದ್ದಾರೆ.

ಎಸ್‌ಎಂ:ಜೆಡಿ:ಜಿಪಿಆರ್.

# ಪೊಲೀಸ್ ಧ್ವಜ ದಿನಾಚರಣೆ

ಬೆಂಗಳೂರು, ಮಾರ್ಚ್ 30 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ವತಿಯಿಂದ ಏಪ್ರಿಲ್ 2 ರ ಭಾನುವಾರದಂದು ಬೆಳಿಗ್ಗೆ 9-00 ಗಂಟೆಗೆ ನಗರದ ಕೋರಮಂಗಲದಲ್ಲಿರುವ ಕೆ.ಎಸ್.ಆರ್.ಪಿ. ಪೆರೇಡ್ ಮೈದಾನದಲ್ಲಿ "ಧ್ವಜ ದಿನಾಚರಣೆ" ಯನ್ನು ಹಮ್ಮಿಕೊಂಡಿದೆ.

ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಸಮಾರಂಭದ ಅಧ್ಯಕ್ಷತೆಯನ್ನು ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ವಹಿಸಲಿದ್ದಾರೆ.

## ಪೊಲೀಸ್ ಧ್ವಜ ದಿನಾಚರಣೆ:

ಪ್ರತಿ ವರ್ಷ ಏಪ್ರಿಲ್ – 2 ರಂದು ರಾಜ್ಯದ ಎಲ್ಲಾ ಪೊಲೀಸ್ ಘಟಕಗಳಲ್ಲಿ ಪೊಲೀಸ್ ಧ್ವಜ ದಿನಾಚರಣೆಯನ್ನು ಅಚರಿಸಲಾಗುತ್ತದೆ. 1965 ಏಪ್ರಿಲ್ 2 ರಂದು ಕರ್ನಾಟಕ ರಾಜ್ಯ ಪೊಲೀಸ್ ಕಾಯ್ದೆ ಜಾರಿಯಲ್ಲಿ ಬಂದಿದ್ದು, ಈ ದಿನವನ್ನು ಪೊಲೀಸ್ ಧ್ವಜ ದಿನಾಚರಣೆಯನ್ನಾಗಿ ಅಚರಿಸಿ ಪೊಲೀಸ್ ಸೇವೆಯಲ್ಲಿ ಇರುವವರೆಲ್ಲರೂ ತಮ್ಮನ್ನು ಸೇವೆಗೆ ಪುನರ್ ಸಮರ್ಪಿಸಿಕೊಳ್ಳುವುದಲ್ಲದೇ, ಈ ದಿನವನ್ನು "ಪೊಲೀಸ್ ಕಲ್ಯಾಣ ದಿನ" ವನ್ನಾಗಿ ಕೂಡ ಆಚರಿಸಲಾಗುತ್ತದೆ. ಈ ವಿಶೇಷ ದಿನದಂದು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರನ್ನು ನೆನಸಿ ಅವರ ಕಲ್ಯಾಣ ಕಾರ್ಯಕ್ರಮವನ್ನು ಚಿಂತಿಸಲಾಗುತ್ತದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಖಾಸಗಿ ಕಾರ್ಮಿಕರ ನಿವೃತ್ತಿ ವಯಸ್ಸು 58 ರಿಂದ 60 ವರ್ಷಕ್ಕೆ ಏರಿಕೆ

ಬೆಂಗಳೂರು, ಮಾರ್ಚ್ 30 (ಕರ್ನಾಟಕ ವಾರ್ತೆ)

**ಪ್ರಸಕ್ತದಲ್ಲಿ ಕರ್ನಾಟಕ ಸರ್ಕಾರವು 1946 ರ ಔದ್ಯೋಗಿಕ ಉದ್ಯೋಗಗಳ (ಸ್ಥಾಯಿ ಆದೇಶಗಳ) ಕಾಯ್ದೆಯಡಿ ಈ ಹಿಂದೆ ರೂಪಿಸಿದ್ದ ಮಾದರಿ ಸ್ಥಾಯಿ ಆದೇಶಗಳಿಗೆ ವಿಧ್ಯುಕ್ತವಾಗಿ ತಿದ್ದುಪಡಿಯನ್ನು ಮಾಡುವ ಮೂಲಕ ಉದ್ಯೋಗಿಗಳ ನಿವೃತ್ತಿ ವಯಸ್ಸನ್ನು 58 ವರ್ಷದಿಂದ 60 ವರ್ಷಕ್ಕೆ ಏರಿಸಿದೆ.**

**ಇದರಿಂದ ಲಕ್ಷಾಂತರ ಕಾರ್ಮಿಕರು ತಮ್ಮ 60ನೇ ವಯಸ್ಸಿನವರೆಗೂ ಸೇವೆ ಸಲ್ಲಿಸಲು ಅವಕಾಶ ದೊರೆತಿರುತ್ತದೆ. ಕರ್ನಾಟಕ ಸರ್ಕಾರವು ದಿನಾಂಕ: 28–03–2017 ವಿಶೇಷ ರಾಜ್ಯ ಪತ್ರದಲ್ಲಿ ಈ ಅಧಿಸೂಚನೆಯನ್ನು ಪ್ರಕಟಿಸಿದೆ ಎಂದು ಕಾರ್ಮಿಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

ಎಸ್‌ಎಂ:ಜೆಡಿ:ಜಿಪಿಆರ್.

## 2016 ನೇ ಸಾಲಿನ ಚಲನಚಿತ್ರ ರಾಜ್ಯ ಪ್ರಶಸ್ತಿಗೆ 126 ಚಿತ್ರಗಳು

**ಬೆಂಗಳೂರು, ಮಾರ್ಚ್ 30 , (ಕರ್ನಾಟಕ ವಾರ್ತೆ)**

2016 ನೇ ಕ್ಯಾಲೆಂಡರ್ ವರ್ಷದಲ್ಲಿ ಅಂದರೆ ದಿನಾಂಕ 01-01-2016 ರಿಂದ 31-12-2016 ರ ಅವಧಿಯೊಳಗೆ ಸೆನ್ಸಾರ್ ಪ್ರಮಾಣಪತ್ರ ಪಡೆದಂತಹ ಕನ್ನಡ ಹಾಗೂ ಪ್ರಾದೇಶಿಕ ಭಾಷಾ ಚಲನಚಿತ್ರಗಳಿಗೆ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಅಪೇಕ್ಷಿಸಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಈ ಕೆಳಕಂಡ ಚಿತ್ರಗಳ ನಿರ್ಮಾಪಕರುಗಳು ಅರ್ಜಿ ಸಲ್ಲಿಸಿರುತ್ತಾರೆ. ಈ ಕೆಳಕಂಡ ಚಲನಚಿತ್ರಗಳನ್ನು ಹೊರತುಪಡಿಸಿ ಬೇರೆ ಚಲನಚಿತ್ರಗಳ ನಿರ್ಮಾಪಕರುಗಳು ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಕೋರಿ ಅರ್ಜಿ ಸಲ್ಲಿಸಿದ್ದಲ್ಲಿ ಜಂಟಿ ನಿರ್ದೇಶಕರು (ಚಲನಚಿತ್ರ), ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ , # 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು ಇವರನ್ನು ದಿನಾಂಕ:05-04-2017 ರ ಸಂಜೆ 5.30 ಗಂಟೆಯೊಳಗೆ ಅರ್ಜಿ ಸಲ್ಲಿಸಿರುವ ದಾಖಲಾತಿಗಳೊಂದಿಗೆ ಸಂಪರ್ಕಿಸುವುದು. ಚಲನಚಿತ್ರಗಳ ವಿವರಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವೆಬ್ ಸೈಟ್ http://karnatakainformation.gov.in/ ನ Downloads ವಿಭಾಗದಲ್ಲಿಯೂ ವೀಕ್ಷಿಸಬಹುದು.

ಚಲನಚಿತ್ರಗಳ ವಿವರ ಇಂತಿದೆ;

1.ಕುಡ್ಲ ಕೆಫೆ (ತುಳು) 2. ಛಲಗಾರ (ಮಕ್ಕಳ ಚಿತ್ರ) 3.ಆಧಾರ್ 4.ತಿಕ್ಲಾ-ಕಂಬನಿಯ ಕಥೆ 5.ಚಿಗುರಿದ ಮನಸ್ಸು (ಮಕ್ಕಳ ಚಿತ್ರ) 6.3 ಬಿಟ್ಟವರು ಊರಿಗೆ ದೊಡ್ಡವರು 7. ಮಮ್ಮಿ 8. ನನ್ನ ನಿನ್ನ ಪ್ರೇಮಕಥೆ 9. ಅರಿವು 10.ಮದಿಪು (ತುಳು) 11. ಅಲ್ಲಮ 12. ಜೈ ಮಾರುತಿ 800 13. ಮಡಮಕ್ಕಿ 14. ಜೀವನವೇ ಚದುರಂಗ (ಮಕ್ಕಳ ಚಿತ್ರ) 15. ಎಕ್ ಆಸ್ಲ್ಯಾರ್ ಎಕ್ ನಾ (ಕೊಂಕಣಿ) 16. ಮಹಾವೀರ ಮಾಚಿದೇವ 17.ನಾನು ಮತ್ತು ವರಲಕ್ಷ್ಮಿ 18. ದೇವತೆ 19. ನಾನಿ 20. ಬಣ್ಣ ಬಣ್ಣದ ಬದುಕು. 21. ಬ್ಯೂಟಿಫುಲ್ ಮನಸುಗಳು,22. ನೀರ್ ದೋಸೆ. 23. ಭೂತಾಯಿ ಮಕ್ಕಳು, 24 ರೈಲ್ವೆ ಚಿಲ್ಡ್ರನ್ 25. ಸೆಲ್ಫಿ 26. ರಾಮ ರಾಮಾ ರೇ 27. ಉಪ್ಪಿನ ಕಾಗದ 28. ಜಾಗೃತಿ29. ಕರ್ವ 30. ಸ 31. ಸೊನ್ನೆ (ಮಕ್ಕಳಚಿತ್ರ) 32. ಬ್ರ್ಯಾಂಡ್ 33. ಚಿಗುರು ಹೂಗಳು.34. ಭೇಟಿ 35. ಪತಂಗ, 36 ಜೂಮ್, 37. ಕರುನಾಡ ಹುಲಿ ಮೈಲಾರ ಮಹದೇವ, 38.ಅಕಿರ 39. ಶ್ರೀಕಂಠ,40.ಸೈಲೆಂಟ್, 41. ಹಾಕಿದ ಹೆಜ್ಜೆ42. ಆರೋಗ್ಯ ದರ್ಪಣ,43. ಸುಗ್ಗಿ (ತುಳು) 44. ಮೇಸ್ತ್ರಿ,45.ಮರಳಿ ಮನೆಗೆ 46. ವಾಚ್ ಮ್ಯಾನ್,47.ಸಾಹಸಿ ಮಕ್ಕಳು (ಮಕ್ಕಳ ಚಿತ್ರ) 48. ತಲೆ ಬಾಚ್ಕೋಳ್ಳಿ ಪೌಡರ್ ಹಾಕೋಳ್ಳಿ,49. ರಾಜು ಎದೆಗೆ ಬಿದ್ದ ಅಕ್ಷರ(ಮಕ್ಕಳಚಿತ್ರ) 50. ಗೋದಿ ಬಣ್ಣ ಸಾಧಾರಣ ಮೈಕಟ್ಟು,51. ಯಶೋಗಾಥೆ, 52.ಓಜಸ್, 53 ಕಿರಗೂರಿನ ಗಯ್ಯಾಳಿಗಳು54. ಪಲ್ಲಟ55. ರನ್ ಆಂಟೋನಿ 56.ಲಿಫ್ಟ್ ಮ್ಯಾನ್ 57. ಮೂಢಾಯಣ (ಮಕ್ಕಳ ಚಿತ್ರ) 58. ಬರ್ಸ (ತುಳು) 59. ಬಬ್ರುಷ 60. ಅಪೂರ್ವ 61. ಆವ್ಮೆಜಾಸ (ಕೊಂಕಣಿ ಮಕ್ಕಳ ಚಿತ್ರ) 62. ನಾನೊಬ್ನೆ ಒಳ್ಳೆವ್ನು63 . ಮುತ್ತಿನ ಪಲ್ಲಕ್ಕಿ 64. ನಟರಾಜ ಸರ್ವೀಸ್ 65. ಹ್ಯಾಪಿ ಬರ್ತಡೇ 66. ಕಿಚ್ಚು67. ಏನೆಂದು ಹೆಸರಿಡಲಿ 68. ನಮ್ಮವರು 69. ದಿಟ್ಟ ಹೆಜ್ಜೆ (ಮಕ್ಕಳ ಚಿತ್ರ) 70. ಯೂ ಟರ್ನ್ 71. ಅಮರಾವತಿ 72. ಇಷ್ಟಕಾಮ್ಯ 73. ಭುಜಂಗ 74. ತರ್ಲೆ ವಿಲೇಜ್ 75. ಸೋನೆಸರಿಕ ಬೇಟಿ (ಲಂಬಾಣಿ) 76. ದಕ್ಷಯಜ್ಞ 77. ಆಂದೋಲನ (ಮಕ್ಕಳ ಚಿತ್ರ) 78. ಸಿಂಪಲ್ಲಾಗಿ ಇನ್ನೊಂದ್ ಲವ್ ಸ್ಟೋರಿ 79. ಬೊಳ್ಳಿಲು (ತುಳು) 80. ಧ್ವನಿ 81. ರಿಸರ್ವೇಶನ್ 82. ಅನಂತನ ಚೆಲ್ಲಾಟ 83. ಸೀತಾನದಿ 84. ನಿರುತ್ತರ 85. ರಿಯಲ್ ಪೋಲೀಸ್ 86. ರಿಕ್ಕಿ 87. ಭಲೆ ಚಾಯ್ ಬಾಯ್ (ಮಕ್ಕಳ ಚಿತ್ರ) 88. ಅಂತರ್ಜಲ, 89. 1098 90. ಸಣ್ಣ ಸತ್ಯ 91. ಜಲ್ಸ 92. ಜಾಗ್ವಾರ್ 93. ಭಗವದ್ ಶ್ರೀ ರಾಮಾನುಜ 94. ಹೂಮನಸು (ಮಕ್ಕಳ ಚಿತ್ರ) 95. ಪರಿವರ್ತನೆ. 96. ಸಂತೆಯಲ್ಲಿ ನಿಂತ ಕಬೀರ 97. ಕಂದ 98. ಶುಭ್ರ 99. ಶ್ರೀ ಓಂಕಾರ ಅಯ್ಯಪ್ಪನೇ 100. ಗೋರಿಯಾ(ಬಂಜಾರ) 101. ಎರಡನೇ ಸಲ 102. ಎಳೆ ನೀರು 103. ಹಳ್ಳಿ ಸೊಗಡು 104. ಶವದ ಮುಂದೆ 105.ಕೋಟಿಗೊಬ್ಬ-2 106. ನಶಿಬಾಚೋ ಖೇಲ್ (ಕೊಂಕಣಿ) 107. ಪಾತುಮ್ಮ 108. ಪುಟಾಣಿ ಸಫಾರಿ(ಮಕ್ಕಳ ಚಿತ್ರ) 109. ಮೀಸಲಾತಿ 110. ಮುಂಬೈ 111. ನಾಗರಹಾವು 112. ಮೂಡ್ಲಸೀಮೆಯಲಿ 113.ಟ್ಯಾಬ್ (ಮಕ್ಕಳ ಚಿತ್ರ) 114. ಒಳ್ಳೆಯವನು115. ಶ್ವೇತ 116. ಮುಂಗಾರು ಮಳೆ-2 117.ಸಿನಿಮಾ ಮೈ ಡಾರ್ಲಿಂಗ್ 118. ಕಿರಿ-ಕ್ ಪಾರ್ಟಿ 119.ಅದ್ಭುತ 120.ಲೀ 121. ಬೈಸಿಕಲ್ ಬಾಯ್ಸ್, 122.ಉಳುವ ಯೋಗಿಯ ನೋಡಲ್ಲಿ 123.ಕಹಿ 124. ಜೀರ್ ಜಿಂಬೆ (ಮಕ್ಕಳ ಚಿತ್ರ) 125.ಯಂಗ್ ಇಂಡಿಯಾ 126.ವೈಷ್ಣವಿ

ಎಂಎಸ್/ಜೆಡಿ/ಕೆಎಂ

## ಮೂಲಭೂತ ಕರ್ತವ್ಯಗಳನ್ನು ಇಲಾಖೆಗಳಿಂದ ಹೊರಡಿಸುವ ಎಲ್ಲಾ ಜಾಹೀರಾತಿನಲ್ಲಿ ಪ್ರಕಟಿಸುವಂತೆ ಸರ್ಕಾರಿ ಆದೇಶ

ಬೆಂಗಳೂರು, ಮಾರ್ಚ್ 30 (ಕರ್ನಾಟಕ ವಾರ್ತೆ)

**ಸರ್ಕಾರದ ಎಲ್ಲಾ ಇಲಾಖೆಗಳು, ನಿಗಮ ಮಂಡಳಿಗಳು, ಕಾರ್ಪೋರೇಷನ್, ಸ್ಥಳೀಯ ಸಂಸ್ಥೆಗಳು ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ನೀಡುವ ಎಲ್ಲಾ ಪ್ರಮುಖ**

ಜಾಹೀರಾತುಗಳಲ್ಲಿ ಮೂಲಭೂತ ಕರ್ತವ್ಯಗಳನ್ನು ಪ್ರಕಟಿಸುವ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದು ಅಗತ್ಯವಾಗಿರುವ ಹಿನ್ನೆಲೆಯಲ್ಲಿ ಇನ್ನು ಮುಂದೆ ತಮ್ಮ ಎಲ್ಲಾ ಇಲಾಖೆಗಳು, ನಿಗಮ ಮಂಡಳಿಗಳು, ಕಾರ್ಪೋರೇಷನ್, ಸ್ಥಳೀಯ ಸಂಸ್ಥೆಗಳು ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಬಿಡುಗಡೆ ಮಾಡುವ ಎಲ್ಲಾ ಪ್ರಮುಖ ಜಾಹೀರಾತುಗಳಲ್ಲಿ ಸಂವಿಧಾನದ ಅನುಚ್ಛೇದ 51 ಎ ರಲ್ಲಿ (**Article 51 A of Constitution of India**) ತಿಳಿಸಿರುವ "ಮೂಲಭೂತ ಕರ್ತವ್ಯ" (**Fundamental duties**)ಗಳನ್ನು ದಪ್ಪ ಅಕ್ಷರಗಳಲ್ಲಿ ತಪ್ಪದೇ ಪ್ರಕಟಿಸುವ ಮೂಲಕ ಸಾರ್ವಜನಿಕರಲ್ಲಿ ಮೂಲಭೂತ ಕರ್ತವ್ಯಗಳ ಕುರಿತು ಅರಿವನ್ನು ಮೂಡಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಸುತ್ತೋಲೆಯನ್ನು ಹೊರಡಿಸಿದ್ದಾರೆ.

ಎಸ್‌ಎಂ:ಬಿಜಿಪಿ:ಕೆಎಂ

## ಕಂದಾಯ ಸಚಿವರ ಪ್ರವಾಸ

ಬೆಂಗಳೂರು, ಮಾರ್ಚ್ 30 (ಕರ್ನಾಟಕ ವಾರ್ತೆ)

ಕಂದಾಯ ಸಚಿವ ಕಾಗೋಡು ತಿಮ್ಮಪ್ಪ ಅವರು ಮಾರ್ಚ್ 31 ರಿಂದ ಏಪ್ರಿಲ್ 2ರ ವರೆಗೆ ಮಾಹೆಯಲ್ಲಿ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಬರ ಹಾಗೂ ನಮೂನೆ 94 ಸಿ –94 ಸಿಸಿ ಹಾಗೂ 50–53ರಡಿ ವಿಲೇವಾರಿಯಾಗಿರುವ ಹಾಗೂ ಬಾಕಿ ಪ್ರಕರಣಗಳ ಬಗ್ಗೆ ಚರ್ಚೆ ನಡೆಸಿ ಎಪ್ರಿಲ್ 2 ರಂದು ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಕೆಎಂ